ಮಾನ್ಯ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಡಿ.ಎಸ್. ಅರುಣ್ ಇವರ ಶುನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯದ ಕುರಿತು.

**<u>ವಿಷಯ:</u>**

ಕುವೆಂಪು ವಿಶ್ವವಿದ್ಯಾಲಯದ ಹಗರಣಗಳು ನಿರಂತರವಾಗಿ ಬಯಲಿಗೆ ಬರುತ್ತಿದ್ದರೂ, ತಿದ್ದಿಕೊಳ್ಳುವ ಪ್ರಯತ್ನಗಳು ನಡೆಯದಿರುವುದು ಬದಲಿಗೆ ಪ್ರಮಾದಗಳ ಮೇಲೆ ಪ್ರಮಾದಗಳು ನಡೆಯುತ್ತಿರುವ ಕುರಿತು ಅಂತ್ಯವಿಲ್ಲದ ಕುವೆಂಪು ವಿಶ್ವವಿದ್ಯಾಲಯದ ಕರ್ಮಕಾಂಡದ ಶೀರ್ಷಿಕೆ ಶೀರೊನಾಮೆಯಡಿ ವಿಜಯವಾಣಿ ದಿನಪತ್ರಿಕೆಯಲ್ಲಿ ವರದಿ ಪ್ರಕಟವಾಗಿರುತ್ತದೆ.

ಕುವೆಂಪು ವಿಶ್ವವಿದ್ಯಾಲಯದಿಂದ ಹೊರಬೀಳುವ ಎಲ್ಲಾ ಆದೇಶಗಳಿಗೆ ಕಾಂಚಾಣವೇ ನಿರ್ಣಾಯಕವಾಗುತ್ತಿದ್ದು, ವಿದ್ಯಾರ್ಥಿ ಲ್ಯಾಪ್-ಟ್ಯಾಪ್ ಕಳವು ಮಾಡಿದ ಪ್ರೊಫೆಸರ್‌ಗೆ ಯಾವುದೇ ಉನ್ನತ ಹುದ್ದೆ ಕೊಡಬಾರದು ಎಂದು ಸಿಂಡಿಕೇಟ್ ಸಭೆಯಲ್ಲಿ ಕೈಗೊಂಡ ನಿರ್ಣಯವನ್ನು ಉಲ್ಲಂಘಿಸಿ, ಅವರಿಗೆ ಆಯಾ ಕಟ್ಟಿನ ಹುದ್ದೆ ಕಲ್ಪಿಸಿರುವುದು ಹಾಗೂ ರಿಜಿಸ್ಟ್ರರ್ ಹುದ್ದೆಗೆ ಹಿರಿಯ ಪ್ರಾಧ್ಯಾಪಕರೊಬ್ಬರುನ್ನು ಸೂಚಿಸಲು ಸರ್ಕಾರದಿಂದ ಪತ್ರ ಬರೆದಿದ್ದರೂ ಉದ್ದೇಶ ಪೂರ್ವಕವಾಗಿ ಆ ಪತ್ರವನ್ನು ಗೌಪ್ಯವಾಗಿಟ್ಟು ಪ್ರೊ. ವಿ. ಕೃಷ್ಣರವರಿಗೆ ಸಿಗಬೇಕಾದ ಕುಲಸಚಿವ ಹುದ್ದೆಯಲ್ಲಿ ಡಾ: ಗೀತಾರವರನ್ನೇ ಮುಂದುವರೆಸಿ ಸರ್ಕಾರದ ಆದೇಶಗಳನ್ನು ಉಲ್ಲಂಘಿಸಿರುವ ಪ್ರಕರಣದ ಹಿಂದೆ ಕುಲಪತಿ ಪ್ರೊ. ಬಿ.ಪಿ. ವೀರಭದ್ರಪ್ಪನವರ ಪಾತ್ರವಿದ್ದು, ಇವರ ಅವಧಿ ಆಗಸ್ಟ್ ವೇಳೆಗೆ ಅಂತ್ಯಗೊಳ್ಳಲಿದೆ. ಈಗಿನ ಪ್ರಭಾರ ಕುಲಸಚಿವರನ್ನು (ಆಡಳಿತ), ಪ್ರಭಾರ ಕುಲಪತಿ ಹಾಗೂ ಲ್ಯಾಪ್‌ಟಾಪ್ ಕಳವು ಅಪರಾಧಿಯನ್ನು ಪ್ರಭಾರ ಕುಲಸಚಿವ ಹುದ್ದೆಗೆ ತಂದು ಕೂರಿಸುವ ವ್ಯವಸ್ಥಿತ ಕೊಡು-ಕೊಳ್ಳುವಿಕೆಯ ವ್ಯವಹಾರ ಬೆಳವಣಿಗೆಗಳು ನಡೆದಿರುವುದು ವರದಿಯಾಗಿರುತ್ತದೆ. ಡಾ: ಗೀತಾ, ಅವರನ್ನು ಪ್ರಭಾರ ಕುಲಸಚಿವರನ್ನಾಗಿ ಮಾಡದಿರುವುದು ಅವರ ಕುಲಪತಿಗಳ ಎಲ್ಲಾ ನಿಯಮ ಬಾಹಿರ ಆದೇಶಗಳಿಗೆ ಆಕ್ಷೇಪ ಎತ್ತದೇ ಚಾಚು ತಪ್ಪದೇ ಪಾಲನೆ ಮಾಡುತ್ತಿದ್ದಾರೆ.

ಕುಲಪತಿ ಪ್ರೊ. ಬಿ.ಪಿ. ವೀರಭದ್ರಪ್ಪರವರ ಅವಧಿಯ ಭ್ರಷ್ಟಾಚಾರ ಸೇರಿದಂತೆ ಎಲ್ಲಾ ವಿಷಯಗಳ ಬಗ್ಗೆ ನಿವೃತ್ತಿ ಶಿಕ್ಷಕರೊಬ್ಬರು ಸಿಂಡಿಕೇಟ್ ಸದಸ್ಯರಿಗೆ ಪತ್ರ ಬರೆದಿದ್ದು, ಕುವೆಂಪು ವಿಶ್ವವಿದ್ಯಾಲಯಕ್ಕೆ ಅಕ್ಷರಸಹಃ ಗ್ರಹಣ ಹಿಡಿದಂತಾಗಿದೆ. ಈ ವಿಚಾರ ಈಗಾಗಲೇ ಮಾನ್ಯ ಉನ್ನತ ಶಿಕ್ಷಣ ಸಚಿವರ ಗಮನಕ್ಕೂ ಸಹ ಬಂದಿದ್ದು, ಲ್ಯಾಪ್‌ಟಾಪ್ ಕಳವು ಮಾಡಿರುವ ಪ್ರೊಫೆಸರ್‌ಗೆ ಯಾವುದೇ ಆಡಳಿತಾತ್ಮಕ ಹುದ್ದೆ ನೀಡಬಾರದು ಹಾಗೂ ಮೂರು ವರ್ಷ ಯಾವುದೇ ಸಂಶೋಧನಾ ವಿದ್ಯಾರ್ಥಿಗೆ ಗೈಡ್ ಆಗಲು ಅವಕಾಶ ನೀಡಬಾರದು ಹಾಗೂ ಸಿಂಡಿಕೇಟ್ ಸಭೆಯ ನಿರ್ಣಯಕ್ಕೆ ವಿರುದ್ಧವಾಗಿ ನೇಮಕಗೊಂಡಿರುವ ಡಾ: ಗೀತಾರವರನ್ನು ತಕ್ಷಣವೇ ಕುಲಸಚಿವೆಯ ಪ್ರಭಾರ ಹುದ್ದೆಯಿಂದ ಬಿಡುಗಡೆ ಮಾಡಿ ನಿವೃತ್ತ ಶಿಕ್ಷಕರು ಮಾಡಿರುವ ಆರೋಪಗಳ ಬಗ್ಗೆ ಸೂಕ್ತ ತನಿಖೆಗೆ ಆದೇಶಿಸಿ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಉನ್ನತ ಶಿಕ್ಷಣ ಸಚಿವರನ್ನು ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ.

**<u>ಉತ್ತರ:</u>**

ಕುವೆಂಪು ವಿಶ್ವವಿದ್ಯಾಲಯದ ಪ್ರಭಾರ ಕುಲಸಚಿವ (ಆಡಳಿತ) ರಾದ ಪ್ರೊ. ಗೀತಾ, ಇವರ ಆಡಳಿತ ನಿರ್ವಹಣೆಯ ಕುರಿತು ಸರ್ಕಾರದಲ್ಲಿ ಹಲವಾರು ದೂರುಗಳು ಸ್ವೀಕೃತವಾಗಿರುತ್ತದೆ. ಸದರಿ ದೂರುಗಳನ್ವಯ ಪರಿಶೀಲಿಸಿ ವರದಿ ನೀಡುವಂತೆ ಹಾಗೂ ಡಾ: ಗೀತಾ, ಕುಲಸಚಿವರು (ಆಡಳಿತ) (ಪ್ರ) ಇವರ ವಿರುದ್ಧ ಸ್ವೀಕೃತವಾಗುತ್ತಿರುವ ದೂರುಗಳ ಹಿನ್ನಲೆಯಲ್ಲಿ, ವಿಶ್ವವಿದ್ಯಾಲಯದ ಆಡಳಿತಾತ್ಮಕ ಹಿತದೃಷ್ಟಿಯಿಂದ, ಸದರಿಯವರನ್ನು ಕುಲಸಚಿವ (ಆಡಳಿತ)(ಪ್ರ) ಹುದ್ದೆಯಿಂದ ತಕ್ಷಣದಿಂದ ಜಾರಿಗೆ ಬರುವಂತೆ ಬಿಡುಗಡೆಗೊಳಿಸಿ, ಪ್ರಸ್ತುತ ಕುವೆಂಪು ವಿಶ್ವವಿದ್ಯಾಲಯದ ಕುಲಸಚಿವ (ಮೌಲ್ಯಮಾಪನ) ಹುದ್ದೆಗೆ ಸರ್ಕಾರದಿಂದ ನಿಯೋಜಿಸಲ್ಪಟ್ಟಿರುವ ಪ್ರೊ. ನವೀನ್ ಕುಮಾರ್, ಇವರನ್ನು ಅಥವಾ ಯಾವುದೇ ದೂರು ಹಾಗೂ ಇಲಾಖಾ ವಿಚಾರಣೆ ಬಾಕಿಯಿರದ ಹಿರಿಯ ಪ್ರಾಧ್ಯಾಪಕರೊಬ್ಬರನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 17(1)ರನ್ವಯ ಅಖಿಲ ಭಾರತ ಸೇವೆಗ ಸೇರಿದ ಒಬ್ಬ ಅಧಿಕಾರಿಯನ್ನು ಅಥವಾ ಕರ್ನಾಟಕ ಆಡಳಿತ ಸೇವೆಗೆ ಸೇರಿದ ಹಿರಿಯ ಶ್ರೇಣಿಯ ಗ್ರೂಪ್ 'ಎ' ಅಧಿಕಾರಿಯ ದರ್ಜೆಗಿಂತ ಕಡಿಮೆಯಿಲ್ಲದ ಮತ್ತು ಮೇಲಿನ ಒಬ್ಬ ಅಧಿಕಾರಿಯನ್ನು ಸರ್ಕಾರದಿಂದ ನೇಮಕ ಮಾಡುವವವರೆಗೂ ತಾತ್ಕಾಲಿಕವಾಗಿ ನೇಮಕ ಮಾಡುವಂತೆ ಕುವೆಂಪು ವಿಶ್ವವಿದ್ಯಾಲಯಕ್ಕೆ ದಿನಾಂಕ: 17.06.2023ರಂದು ನಿರ್ದೇಶನ ನೀಡಲಾಗಿರುತ್ತದೆ.

ಮುಂದುವರೆದು, ರಾಜ್ಯದ ಸಾರ್ವಜನಿಕ ವಿಶ್ವವಿದ್ಯಾಲಯಗಳ ಸುಗಮ ಕಾರ್ಯನಿರ್ವಹಣೆಗಾಗಿ ಕುವೆಂಪು ವಿಶ್ವವಿದ್ಯಾಲಯವನ್ನು ಒಳಗೊಂಡಂತೆ ಎಲ್ಲಾ ವಿಶ್ವವಿದ್ಯಾಲಯಗಳಿಗೆ ಕುಲಸಚಿವ (ಆಡಳಿತ) ಹುದ್ದೆಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 17(1)ರನ್ವಯ ಅಖಿಲ ಭಾರತ ಸೇವೆಗೆ ಸೇರಿದ ಒಬ್ಬ ಅಧಿಕಾರಿಯನ್ನು ಅಥವಾ ಕರ್ನಾಟಕ ಆಡಳಿತ ಸೇವೆಗೆ ಸೇರಿದ ಹಿರಿಯ ಶ್ರೇಣಿಯ ಗ್ರೂಪ್ 'ಎ' ಅಧಿಕಾರಿಯ ದರ್ಜೆಗಿಂತ ಕಡಿಮೆಯಿಲ್ಲದ ಮತ್ತು ಮೇಲಿನ ಒಬ್ಬ ಅಧಿಕಾರಿಯನ್ನು ನೇಮಕ ಮಾಡುವಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೂ ಸಹ ಉನ್ನತ ಶಿಕ್ಷಣ ಇಲಾಖೆಯಿಂದ ಕಡತ ರವಾನಿಸಲಾಗಿದ್ದು, ಪ್ರಸ್ತುತ ಕಡತವು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಪರಿಶೀಲನೆಯಲ್ಲಿದೆ.

************************

ಸಂಖ್ಯೆ: ಇಡಿ 42 ಯುಎಸ್‌ವಿ 2023

(ಡಾ: ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಸಚಿವರು